ದಿಃ 30-05-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರವಾಗಿ ಶ್ರೀ ಎಸ್ ಎಲ್ ಎಸ್ ವಕೀಲರಿಂದ.

ಈ ದಾವೆಯಲ್ಲಿ ನಾನು 1 ನೇ ವಾದಿಯಾಗಿದ್ದು ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೆನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದ್ರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಇಂದು ನಾನು ಮಾನ್ಯ ನ್ಯಾಯಲಯಕ್ಕೆ ಸರ್ವೆ ನಂಬರ 151 ಕ ಹಾಗೂ 140 ರ 2018-2019 ಸಾಲಿನ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 1 ಮತ್ತು 2 ಎಂದು, ಸರ್ವೆ ನಂಬರ 151 ರ 1960-70 ರಿಂದ 1972-73 ನೇ ಸಾಲಿನ, 1973-74 ನೇ ಸಾಲಿನಿಂದ 1976-77 ನೇ ಸಾಲಿನ, 1977-78 ನೇ ಸಾಲಿನಿಂದ 1979-80 ನೇ ಸಾಲಿನ, 1980-81 ನೇ ಸಾಲಿನಿಂದ 1983-84 ನೇ ಸಾಲಿನ, 1965-66 ನೇ ಸಾಲಿನಿಂದ 1968-69 ನೇ ಸಾಲಿನ ರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 3 ರಿಂದ 7 ಎಂದು, ದಿನಾಂಕ 10-10-2018 ರಂದು 2 ನೇ ವಾದಿ ತಹಶೀಲ್ದಾರ ಹಳಿಯಾಳ ರವರಿಗೆ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 8 ಎಂದು, ದಿನಾಂಕ 30-10-2017 ರಂದು ತಹಶೀಲ್ದಾರ ನ್ಯಾಯಾಲಯದವರು ಕಳುಹಿಸಿದ ನೊಟೀಸ್ ಅನ್ನು ಹಾಜರುಪಡಿಸಿದು ಅದನ್ನು ನಿಪಿ 9 ಎಂದು, ಎಮ್ ಆರ ಸಂಖ್ಯೆ ಎಚ್ 13 ಗೆ ಸಂಬಂಧಿಸಿದ ನಮೂನೆ-21 ರಲ್ಲಿಯ ನೊಟೀಸ ಅನ್ನು ಹಾಜರುಪಡಿಸಿದು ಅದನ್ನು ನಿಪಿ 10 ಎಂದು, ನಾಗಪ್ಪ ಕೇದಾರಪ್ಪ ಮಟ್ಟಿ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದು ಅದನ್ನು ನಿಪಿ 11 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ.

**ಪಾಟೀ ಸವಾಲು :** ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು, ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು .

O.S. No.8/2019 -PW-1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೆ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.